# ವೀರ ಸಂಕಲ್ಪ

ಮೆಜೆಸ್ಟಿಕ್ ಬಸ್ ನಿಲ್ದಾಣದ ಬೆಂಚುಕಲ್ಲಿನ ಮೇಲೆ ಅಂಗಾತ ಮಲಗಿದ್ದ ತರುಣನ ಕಣ್ಣಿಗೆ ಆ ದಿನ ನಕ್ಷತ್ರಗಳು ಕಂಡಿರಲಿಲ್ಲ. ನಿಲ್ದಾಣದ ಶೀಟುಗಳನ್ನು ಹಿಡಿದಿಟ್ಟುಕೊಂಡಿದ್ದ ಕಬ್ಬಿಣದ ಸಲಾಕೆಗಳಲ್ಲಿನ ತುಕ್ಕು ಮನಸ್ಸಿಗೂ ತಾಗಿರಲಿಕ್ಕೆ ಸಾಕು. ಇನ್ನೇನು ಸೆಟ್ಟೇರಿಯೇಬಿಟ್ಟಿತು ಎಂದುಕೊಂಡಿದ್ದ ಸಿನಿಮಾ ಚಿತ್ರೀಕರಣಕ್ಕೆ ಮೊದಲೇ ಪ್ಯಾಕಪ್ ಆಗಿತ್ತು. ಅದುವರೆಗೆ ಮಾಡಿದ ಕಥೆಯ ಚರ್ಚೆ, ಚಿತ್ರಕಥೆಯ ಹೆಣಿಗೆ, ಕಸರತ್ತು ಮಾಡಿ ರೂಪಿಸಿಕೊಂಡಿದ್ದ ದೇಹ, ನೃತ್ಯ ಲಾಲಿತ್ಯಕ್ಕೆ ಒಡ್ಡಿದ್ದ ಸಾಣೆ... ಎಲ್ಲವೂ ಹೊಳೆಯಲ್ಲಿ ತೊಳೆದ ಹುಣಸೆಯಂತಾಯಿತು ಎಂದು ಆಪ್ತೇಷ್ಟರು ಲೊಚಗುಟ್ಟಿದ್ದರು.

'ಗಾಂಧಿನಗರದಲ್ಲಿ ನಾಯಕನಾಗಿ ನನ್ನದೊಂದು ಎತ್ತರದ ಕಟೌಟ್ ನಿಲ್ಲುವಂತೆ ಮಾಡದೇಹೋದರೆ... ನನ್ನ ಹೆಸರು ಡ್ಯಾಷ್ ಅಲ್ಲ' ಎಂದು ಅಂದು ಮಾಡಿದ ಶಪಥ ಕನಸುಗಳಿಗೆ ರೆಕ್ಕೆಪುಕ್ಕ ಮೂಡಿಸಿತು. ಧಾರಾವಾಹಿ, ನಾಟಕ ಎಂದೆಲ್ಲ ತಾಲೀಮಿಗೆ ಒಡ್ಡಿಕೊಂಡೇ ಜನಪ್ರಿಯ ನಾಯಕನಾದ ತರುಣ ಯಶಸ್ಸಿನ ನಿರ್ವಹಣೆಯಲ್ಲೂ ವಾರಗೆಯ ನಟರಿಗಿಂತ ಭಿನ್ನ. 'ಪೊಲಿಟಿಕಲ್ ಕರೆಕ್ಟ್‌ನೆಸ್'ನಲ್ಲೂ ಅವರಿಗೆ ಅವರೇ ಸಾಟಿ. ಯಾರನ್ನು ಅಣ್ಣ ಎನ್ನಬೇಕು, ಬಾಸ್ ಎನ್ನಬೇಕು, ಯಾರ ಹೆಗಲ ಮೇಲೆ ಕೈಹಾಕಬೇಕು, ಯಾವ ನಿರ್ಮಾಪಕರಿಗೆ ಕಾಲ್‌ಷೀಟ್ ಕೊಡಬೇಕು ಎಂಬಿತ್ಯಾದಿ ಸೂಕ್ಷ್ಮಗಳಲ್ಲಿ ಪಳಗಿದ ಯಶೋಮತಿ. ಪ್ರೀತಿಸಿ, ಮದುವೆಯಾದದ್ದು ನಟಿಯನ್ನೇ.

ಸಿನಿಮಾ ವಸ್ತುವಿನ ವಿಷಯದಲ್ಲಿ ಅವರು ಹೆಚ್ಚೇನೂ ರಿಸ್ಕ್ ತೆಗೆದುಕೊಳ್ಳುವುದಿಲ್ಲ. ಪಾತ್ರಕ್ಕೆ ತಕ್ಕಂತೆ ತಮ್ಮ ಚಹರೆ ಕಾಣುವಂತೆ ಮಾಡಿಕೊಳ್ಳುವುದು, ದೇಹ ರೂಪಿಸಿಕೊಳ್ಳುವುದು, ಬಿಲ್ಡಪ್ ದೃಶ್ಯಗಳನ್ನು ಹೆಚ್ಚಾಗಿ ಹೆಣೆಯುವಂತೆ ಪ್ರೇರೇಪಿಸುವುದು, ಎಂಥ ಪ್ರಯೋಗಶೀಲ ನಿರ್ದೇಶಕ ಬಂದರೂ ಇವೆಲ್ಲ ಸೂತ್ರಗಳಿಗೆ ಬದ್ಧನಾಗುವಂತೆ ಪುಸಲಾಯಿಸುವುದು ಮೊದಲಿನಿಂದಲೂ ಇದೆ. ಜನ ನೋಡುವ ಸಿನಿಮಾಗಳನ್ನಷ್ಟೇ ಮಾಡಬೇಕು ಎಂಬ ತನ್ನ ಉಮೇದೇ ಇಂಥ ಸೂತ್ರಬದ್ಧತೆಗೆ ಕಾರಣ ಎಂದು ಅವರು ಬಹಳ ಹಿಂದೆಯೇ ಹೇಳಿಕೊಂಡಿದ್ದರು.

ಜನಪ್ರಿಯತೆಯ ಪ್ರಭಾವಳಿಯಲ್ಲಿ ಇದ್ದರೂ ನಟ ಸಮಾಜಮುಖಿ. ಅವರ ಪತ್ನಿ, ನಟಿ ಸೂಕ್ಷ್ಮ ಮನಸ್ಸಿನ ಯುವತಿ. ಇಬ್ಬರೂ ಕೆಲವು ಮಾತುಗಳಿಗೆ ಮೊದಲಿನಿಂದಲೂ ನಿಷ್ಠರು. ಕೆರೆಗಳ ಪುನರುಜ್ಜೀವನದ ಮಹತ್ವದ ಯೋಜನೆ ಪ್ರಾರಂಭಿಸಿದ್ದರೂ ರಾಜಕಾರಣದಿಂದ ಗಾವುದ ದೂರವೇ ಉಳಿದಿದ್ದಾರೆ. ಇನ್ನು ಕೆಲವರು ರಾಜಕಾರಣದ ರಾಡಿಯಲ್ಲಿ ಕಾಲಿಟ್ಟು ಜಾರಿಬಿದ್ದರೂ ಅವರನ್ನು ಕಂಡು ನಗಕೂಡದು ಎಂಬ ಸಜ್ಜನಿಕೆಯೂ ಇದೆ.

ದೀರ್ಘಕಾಲದಿಂದ ಅವರು ಬಿಟ್ಟಿರುವ ಒತ್ತೊತ್ತಾದ ಗಡ್ಡ ಮುದ್ದಿನ ಮಡದಿಗೆ ಆಗೀಗ ಕಿರಿಕಿರಿ ಉಂಟುಮಾಡುತ್ತದೆ. ಪಾತ್ರ ಅಂದಮೇಲೆ ಅವನ್ನೆಲ್ಲ ಸಹಿಸಿಕೊಳ್ಳಬೇಕಲ್ಲ ಎಂದು ಪಾಠ ಹೇಳಿ, ಮುಗುಳ್ನಗುವ ನಟ ಈಗಲೂ ಅಂಗಾತ ಮಲಗಿದಾಗ ಕನಸುಗಳು ಬೀಳುತ್ತವಂತೆ.

**ವಿಶಾಖ ಎನ್.**

Printed and Published by B.A. Ravi on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: **K.N. SHANTH KUMAR.**

Editorial Office: 75, M.G Road, Bengaluru-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68